ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೊಡ್ಡಬಳ್ಳಾಪುರ

ಸಿಸಿ ನಂ 143/13

**ಸಿ ಡಬ್ಲೂ 1 ಪಿಡಬ್ಲೂ: 1**

| | |
|---|---|
| ಸಾಕ್ಷಿದಾರನ ಹೆಸರು | **ಪುಷ್ಪ ಶಿವಶಂಕರ್** |
| ತಂದೆ ಹೆಸರು | ಶಿವಶಂಕರ್ |
| ವಯಸ್ಸು | 52 ವರ್ಷ |
| ಉದ್ಯೋಗ | ಎಲ್ ಐ ಸಿ ಎಜೆಂಟ್ |
| ವಾಸ ಸ್ಥಳ | ಸೋಮೇಶ್ವರ ಬಡಾವಣೆ |

ಈ ದಿನ ದಿನಾಂಕ 27-02-2019 ರಂದು ಸಾಕ್ಷಿಯನ್ನು ಕರೆಯಿಸಿಪ್ರಮಾಣೀಕರಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ಎಪಿಪಿ ಯವರಿಂದ:-

ಚಾಸ-9 ರವರು ನನ್ನ ಮಗ ಆಗಿರುತ್ತಾರೆ. ಸುಮಾರು 4 ವರೆ ವರ್ಷಗಳ ಹಿಂದೆ ಸೋಮೇಶ್ವರ ಬಡಾವಣೆಯ 1ನೇ ಮಹಡಿಯ ಮನೆಯಲ್ಲಿ ಚಾಸ-9 ರವರು ಮಲಗಿದ್ದಾಗ ರಾತ್ರಿ ಸಮಯದಲ್ಲಿ ಚಾಸ-9 ರವರು ಸದರಿ ಮನೆಯ ಕಿಟಿಕಿಯಲ್ಲಿ ಇಟ್ಟಿದ್ದಂತಹ ಐ ಪ್ಯಾಡ್, ಲ್ಯಾಪ್‌ಟಾಪ್ ಮತ್ತು ಸಾಮ್‌ಸಂಗ್ ಮೊಬೈಲ್ ಫೋನ್ ಕಳವು ಆಗಿರುತ್ತದೆ. ಕಳತನ ದಿನಾಂಕ 07-04-2015 ರಂದು ಆಗಿರುತ್ತದೆ. ಈ ಕುರಿತು ನಾನು ದೂರನ್ನು ದಿನಾಂಕ 08-04-2015 ರಂದು ನೀಡಿರುತ್ತೇನೆ.

ನಾನು ದೂರನ್ನು ನೀಡಿದ ನಂತರ ಪೋಲಿಸರು ಘಟನಾ ಸ್ಥಳಕ್ಕೆ ಬಂದು ಮನೆಯನ್ನು ಪರಿಶೀಲಿಸಿರುತ್ತಾರೆ. ನಂತರ ಸುಮಾರು 6-7 ತಿಂಗಳ ನಂತರ ನಮ್ಮ ಮನೆ ಬಳಿ ಪೋಲಿಸರು ವ್ಯಕ್ತಿಯೊಬ್ಬರನ್ನು ನನ್ನ ಸಮಕ್ಷಮ ಹಾಜರುಪಡಿಸಿ ಸದರಿಯವರೇ ಚಾಸ-9 ರವರು ಮನೆಯ ಕಿಟಿಕಿಯಲ್ಲಿ ಇಟ್ಟಿದ್ದಂತಹ ಐ ಪ್ಯಾಡ್, ಲ್ಯಾಪ್‌ಟಾಪ್ ಮತ್ತು ಸಾಮ್‌ಸಂಗ್ ಮೊಬೈಲ್ ಫೋನ್ ಕಳವು ಮಾಡಿರುವುದಾಗಿ ಹೇಳಿರುತ್ತಾರೆ. ನಂತರ ನಾನು ಠಾಣೆಗೆ ಹೋಗಿ ಸದರಿ ಆಸಾಮಿಯಿಂದ ಪೋಲಿಸರು ಅಮಾನತ್ತುಪಡಿಸಿಕೊಂಡ ಲ್ಯಾಪ್‌ಟಾಪ್ ಮತ್ತು ಐ ಪ್ಯಾಡ್‌ನ್ನು ಗುರುತಿಸಿ ನನ್ನ ವಶಕ್ಕೆ ಪಡೆದುಕೊಂಡಿರುತ್ತೇವೆ. ನಾನು ಠಾಣೆಯಲ್ಲಿ ವಶಕ್ಕೆ ಪಡೆದ ಲ್ಯಾಪ್‌ಟಾಪ್ ಮತ್ತು ಐ ಪ್ಯಾಡ್‌ನ್ನು ನೋಡಿದರೆ ಗುರುತಿಸುತ್ತೇನೆ. ನಾನು ಈಗ ಸದರಿ ಲ್ಯಾಪ್‌ಟಾಪ್ ಮತ್ತು ಐ ಪ್ಯಾಡ್ ಇರುವ ಛಾಯ ಚಿತ್ರಗಳನ್ನು ನೋಡುತ್ತಿದ್ದೇನೆ. ಸಾಕ್ಷಿ ನೋಡಿ ಗುರುತಿಸಿದ ಸದರಿ ಛಾಯ ಚಿತ್ರಗಳನ್ನು ಅನುಕ್ರಮವಾಗಿ ನಿಪಿ-2 ಮತ್ತು ನಿಪಿ-3 ಎಂದು ಗುರುತಿಸಲಾಯಿತು. ಪೋಲಿಸರು ಘಟನೆ ನಡೆದ 6-7 ತಿಂಗಳ ನಂತರ ನಮ್ಮ ಮನೆ ಬಳಿ ನನ್ನ ಸಮಕ್ಷಮ ಹಾಜರುಪಡಿಸಿದ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸದರಿಯವರು ಈ ದಿನ ನ್ಯಾಯಾಲಯದಲ್ಲಿ ಆರೋಪಿ ಆಗಿ ಹಾಜರು ಇರುತ್ತಾರೆ.

ಪಿ.ಡಬ್ಲ್ಯೂ: 1

<u>ಪಾಟೀ ಸವಾಲು ಶ್ರೀ ಕೆ ಕೆ  ವಕೀಲರಿಂದ:</u>

ನ್ಯಾಯಾಲಯದ ಕಲಾಪದ ವೇಳೆ ಮುಗಿದಿದ್ದರಿಂದ ಮಧ್ಯಾಹ್ನ 3-00 ಗಂಟೆಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು
ದೊಡ್ಡಬಳ್ಳಾಪುರ

<u>ಈ ದಿನ ದಿನಾಂಕ 27-02-2019 ರಂದು ಸಾಕ್ಷಿಯನ್ನು ಕರೆಯಿಸಿಪ್ರಮಾಣೀಕರಿಸಲಾಯಿತು.</u>

ನಾನು ಪದವಿ ವಿದ್ಯಾಭ್ಯಾಸವನ್ನು ಪೂರ್ಣಗೊಳಿಸಿರುವುದಿಲ್ಲ. ನಾನು ಎಲ್ ಐ ಸಿ ಏಜೆಂಟ್ ಆಗಿರುತ್ತೇನೆ. ನಾನು ಬಿ ಜೆ ಪಿ ಪಕ್ಷದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಆಗಿರುತ್ತೇನೆ. ನಾನು ಎಲ್ ಐ ಸಿ ಏಜೆಂಟ್ ಮತ್ತು  ಬಿ ಜೆ ಪಿ ಪಕ್ಷದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಆಗಿದ್ದರಿಂದ ಅಗ್ಗಾಗ್ಗ ನನ್ನ ಕಾರ್ಯನಿಮಿತ್ತ ಠಾಣೆಗೆ ಹೋಗುತ್ತಿರುತ್ತೇನೆ ಎಂದರೆ ಸರಿ. ನಾನು 8ನೇ ತಾರೀಖಿಗೆ ದೂರನ್ನು ನೀಡಿರುತ್ತೇನೆ. ಯಾವ ತಿಂಗಳ 8ನೇ ತಾರೀಖೆಂದು ನನಗೆ ಈಗ ನೆನಪಿರುವುದಿಲ್ಲ. ನಾನು ದೂರನ್ನು 2014 ಸಾಲಿನಲ್ಲಿ ನೀಡಿರಬಹದು. ಕಳ್ಳತನವಾದ ಲ್ಯಾಪ್‌ಟ್ಯಾಪ್, ಮೊಬೈಲ್ ಮತ್ತು ಐ ಪ್ಯಾಡ್ ಚಾಸ-9 ರವರಿಗೆ ಸೇರಿರುತ್ತದೆ ಎಂದು ತೋರಿಸಲು ನಾನು ಪೋಲಿಸರಿಗೆ ಯಾವುದೇ ದಾಖಲೆಯನ್ನು ನೀಡಿರುವುದಿಲ್ಲ. ಐ ಪ್ಯಾಡ್ ಆಪಲ್ ಕಂಪನಿಯದಾಗಿದ್ದು, ಮೊಬೈಲ್ ಪೋನ್ ಸ್ಯಾಮ್‌ಸಂಗ್ ಕಂಪನಿಯದ್ದಾಗಿರುತ್ತದೆ. ಕಳ್ಳತನವಾದ ಲ್ಯಾಪ್‌ಟ್ಯಾಪ್ ಯಾವ ಕಂಪನಿಯದ್ದು ಎಂದು ನನಗೆ ನೆನಪಿರುವುದಿಲ್ಲ. ಪೋಲಿಸರು ಘಟನಾ ಸ್ಥಳವನ್ನು ಪರಿಶೀಲಿಸಲು ಯಾವ ದಿನಾಂಕದಂದು ಬಂದಿರುತ್ತಾರೆಂದು ನನಗೆ ನೆನಪಿರುವುದಿಲ್ಲ. ಪೋಲಿಸರು ಘಟನಾ ಸ್ಥಳಕ್ಕೆ ಪರಿಶೀಲನಗೆಂದು ಬಂದಾಗ ಸ್ಥಳದಲ್ಲಿ ಸಾರ್ವಜನಿಕರು ಇರಲಿಲ್ಲ. ಪೋಲಿಸರು ನಮ್ಮ ಮನಗೆ ಬಂದು ಘಟನಾ ಸ್ಥಳದ ಛಾಯ ಚಿತ್ರಗಳನ್ನು ತೆಗೆದುಕೊಂಡಿರುವುದಿಲ್ಲ.

ಪಿ.ಡಬ್ಲೂ: 1

ನಮ್ಮ ಮನೆಯಲ್ಲಿ 5 ಕೊಠಡಿಗಳು ಇರುತ್ತವೆ. ಕಳ್ಳತನವಾಗಿರುತ್ತದೆ ಎಂದು ಹೇಳುವ ಕೊಠಡಿಯ ಅಳತೆಯನ್ನು ನನಗೆ ಹೇಳಲು ಆಗುವುದಿಲ್ಲ. ನನ್ನ ದೂರಿನಲ್ಲಿ ಲ್ಯಾಪ್‌ಟಾಪ್ ಮತ್ತು ಐ ಪ್ಯಾಡ್‌ನ್ನು ಚಾರ್ಜ್‌ಗೆ ಇಡಲಾಗಿತ್ತು ಎಂದು ಬರೆದಿದೆ ಎಂದರೆ ಸರಿ. ಚಾರ್ಜ್ ಮಾಡಲು ಉಪಯೋಗಿಸಿದ ಸ್ವಿಚ್ ಕಿಟಕಿ ಬಳಿಯೇ ಇರುತ್ತದೆ. ನಮ್ಮ ಮನೆಯ ಕೊಠಡಿಯ ಕಿಟಕಿಗಳಿಗೆ ಕಂಬಿಯನ್ನು ಅಳವಡಿಸಲಾಗಿದೆ ಎಂದರೆ ಸರಿ. ಸಾಕ್ಷಿ ಸ್ವತಃ ಆದರೆ ಕಂಬಿ ಮೂಲಕ ಕೈಯನ್ನು ಹಾಕಬಹುದು ಎಂದು ನುಡಿಯುತ್ತಾರೆ. ಚಾರ್ಜ್ ಹಾಕಿರುವ ಲ್ಯಾಪ್‌ಟಾಪ್ ಮತ್ತು ಐ ಪ್ಯಾಡ್‌ನ್ನು ಕಿಟಕಿ ಮೂಲಕ ತೆಗೆದುಕೊಳ್ಳಲು ಆಗುವುದಿಲ್ಲ ಎಂದರೆ ಸರಿಯಲ್ಲ. ನಾನು ಪೋಲಿಸರಿಂದ ವಶಕ್ಕೆ ಪಡೆದ ಲ್ಯಾಪ್‌ಟಾಪ್ ಈಗ ಅಬುದಾಬಿಯಲ್ಲಿರುವ ನನ್ನ ಮಗಳ ಜೊತೆ ಇರುತ್ತದೆ. ಪೋಲಿಸರು ಆರೋಪಿಯನ್ನು ನನ್ನ ಸಮಕ್ಷಮ ಯಾವ ದಿನಾಂಕದಂದು ಹಾಜರುಪಡಿಸಿರುತ್ತಾರೆಂದು ನನಗೆ ನೆನಪಿರುವುದಿಲ್ಲ. ಆರೋಪಿಯನ್ನು ನನ್ನ ಸಮಕ್ಷಮ ಹಾಜರುಪಡಿಸಿದ ನಂತರದಲ್ಲಿ ನಾನು ಯಾವಾಗ ಠಾಣೆಗೆ ಹೋಗಿರುತ್ತೇನೆಂದು ನಿಖರವಾಗಿ ಹೇಳಲು ಆಗುವುದಿಲ್ಲ. ನಮ್ಮ ಮನೆಯಲ್ಲಿ ಯಾವುದೇ ವಸ್ತುಗಳ ಕಳ್ಳತನ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಪೋಲಿಸರು ಸ್ಥಳ ಪರಿಶೀಲನಗೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಪೋಲಿಸರ ಮಾತನ್ನು ಕೇಳಿ ಸುಳ್ಳು ದೂರನ್ನು ದಾಖಲಿಸಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು
ದೊಡ್ಡಬಳ್ಳಾಪುರ